SRI B. BASAVALINGAPPA —I retute the allegations. He cannot talk anything and.....

(interruption)

ಅಧ್ಯಕ್ಷರು.—ಮಿಸ್ಟರ್ ವೆಂಕಟೇಶ್ ... ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡಲು ತಾವು ಅವಕಾಶವನ್ನೇ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಎಂ. ಮಹದೇವ್ —ಪಾಯಿಂಟ್ ಆಫ್ ಆರ್ಡರ್ ಸರ್.

ಅಧ್ಯಕ್ಷರು.—ದಯವಿಟ್ಟು ತಾವೆಲ್ಲರೂ ಕೂಳಿತುಕೊಳ್ಳಬೇಕು. ನಾನು ರೂಲಿಂಗ್ ಕೊಡುತ್ತಾ ಇದ್ದೇನೆ ಕುಳಿತುಕೊಳ್ಳಿ. ಶಿವಕುಮಾರ್ ಕುಳಿತುಕೊಳ್ಳಿ, ಮಹದೇವ್ ಕುಳಿತುಕೊಳ್ಳಿ. ನನಗೆ ನೀವು ಅವಕಾಶವನ್ನೇ ಕೊಡುತ್ತಾ ಇಲ್ಲ.

(ಗೊಂದಲ)

MR. SPEAKER.—I call the House to order.

ಮಾನ್ಯ ವಂಕಟೇಶ್, ನೀವು ನೇರವಾಗಿ ಸಚಿವರೇ ಶಾಮೀಲಾಗಿದ್ದಾರೆ ಹಾಗೆ ಎಂದು ಹೇಳಿ ಪೂರ್ವಭಾವಿಯಾಗಿ ನನಗೆ ಯಾವ ಸೂಚನೆಯನ್ನು ಕೊಡದೆ ತಾವು ಈ ರೀತಿ ಆರೋಪಣೆ ಮಾಡತಕ್ಕದ್ದು ಸರಿಯಲ್ಲ, ಅದನ್ನು ರೆಕಾರ್ಡಿನಿಂದ ತೆಗೆದುಹಾಕುತ್ತಾ ಇದ್ದೇನೆ.

SRI B. BASAVALINGAPPA.—He makes reckless allegations. He cannot do that.

(Interruption)

ಅಧ್ಯಕ್ಷರು.—ಮಂತ್ರಿಗಳು ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ಮಾಡುತ್ತೇವೆ, ತಪ್ಪಿತಸ್ಥರಾರು ಯಾರು ಇದ್ದಾರೆ ಅವರ ಮೇಲೆ ವರದಿ ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಜವಾಬ್ದಾರಿ ಸ್ಥಾನದಲ್ಲಿ ಕುಳಿತು, ಜವಾಬ್ದಾರಿಯುತವಾದಂಥ ಹೇಳಿಕೆಯನ್ನು ಕೊಟ್ಟಮೇಲೂ ಈ ರೀತಿ ಅತಿರೇಕವಾದಂಥ ಟೀಕೆಗಳನ್ನು ಮಾಡತಕ್ಕದ್ದು ಸರಿಯಲ್ಲ. ನೀವು ಹೊಸ ಸದಸ್ಯರಿದ್ದೀರಿ. ಆವೇಶ ಎಲ್ಲರಿಗೂ ಬರುತ್ತದೆ. ಆವೇಶದ ಭರದಲ್ಲಿ ಎಲ್ಲರನ್ನೂ ಕೂಡ ಈ ರೀತಿ ನಿಂದನೆ ಮಾಡತಕ್ಕದ್ದು ಸರಿಯಲ್ಲ. ಈ ಪ್ರಶ್ನೆ ಇಲ್ಲಿಗೆ ಮುಗಿಯಿತು.

ಈಗ ಸದನ ಪುನಃ ಮಧ್ಯಾಹ್ನ ಎರಡು ಗಂಟೆ ಐದು ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ ೧ ಗಂಟೆ ೫೫ ನಿಮಿಷಕ್ಕೆ ಮೇಲೆದ್ದು ಪುನಃ ೨ ಗಂಟೆ ೫ ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ ೨-೦೫ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿ ಸುಮರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

## ನಿಯಮ 334ರ ಮೇರೆಗೆ

(1) ಉಳ್ಳಾಲ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಅಕ್ರಮ ಸಾಗುವಳಿ ಮಾಡುವವರಿಗೆ ಹಕ್ಕುಪತ್ರ ದೊರಕಿಸಲು ಒತ್ತಾಯ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸಾವಿರಾರು ಬಡವರು ಅಕ್ರಮವಾಗಿ ಜಮೀನಿನಲ್ಲಿ ಕುಳಿತುಕೊಂಡು ಮನೆ ಕಟ್ಟಿ ಕೃಷಿ ಮಾಡಿಕೊಂಡು ಬಂದಿರುತ್ತಾರೆ. ನನ್ನ ಉಳ್ಳಾಲ ಕ್ಷೇತ್ರದಲ್ಲಿ ಸಾವಿರಾರು ಅಕ್ರಮ ಜಮೀನು ಪಡೆದು ವಾಸಿಸುವವರಿದ್ದಾರೆ. ಇದರಲ್ಲಿ ಬಡ ಕಾರ್ಮಿಕರಿದ್ದಾರೆ, ಮಧ್ಯಮ ವರ್ಗದವರಿದ್ದಾರೆ. ಕೂಲಿಗಾರರಿದ್ದಾರೆ. ಆದರೆ ಅನೇಕ ವರ್ಷಗಳಿಂದ ಅಕ್ರಮವಾಗಿ ಕುಳಿತವರಿಗೆ ಇನ್ನೂ ಹಕ್ಕುಪತ್ರ ಸಿಕ್ಕಿಲ್ಲ. ಅಕ್ರಮ ಸಕ್ರಮವಾಗಿಲ್ಲ. ಆದಕಾರಣ ಅಕ್ರಮ ಕುಳಿತ ಜಮೀನನ್ನು ಸಕ್ರಮ ಮಾಡಿ ಹಕ್ಕುಪತ್ರ ಕೊಡುವ ಕೆಲಸವನ್ನು ಸರ್ಕಾರ ಜರೂರಾಗಿ ಮಾಡಬೇಕಾಗಿದೆ. ಅತಿ ಶೀಘ್ರ ಮಾಡಲಾಗುವುದೇ ? ಈ ಕುರಿತು ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಹೇಳಬೇಕೆಂದರೆ, ಮಾನ್ಯ ಇದಿನಬ್ಬನವರು ಪ್ರಸ್ತಾಪ ಮಾಡಿರುವ ವಿಷಯ ಬಹಳ ಗಮನಾರ್ಹವಾಗಿದೆ. ಇದರ ಬಗ್ಗೆ ಸರ್ಕಾರ ಕೂಡ ಬಹಳಷ್ಟು ಚಿಂತನೆ ಮಾಡಿದೆ. ಆದಷ್ಟು ಬೇಗ ಈ ಅನಧಿಕೃತವಾಗಿರುವ ಮಾಡಿರುವ ಜಮೀನನ್ನು ಸಕ್ರಮಗೊಳಿಸಲು ಆದಷ್ಟು ಬೇಗ ಸರ್ಕಾರ ತನ್ನ ನೀತಿಯನ್ನು ನಿರೂಪಣೆ ಮಾಡಿ, ಈ ಜನರಿಗೆ ಸಹಾಯ ಮಾಡಲು ಎಲ್ಲ ರೀತಿಯ ಕ್ರಮವನ್ನು ಕೈಗೊಳ್ಳುತ್ತದೆಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

(೨) ಬೆಂಗಳೂರು ನಗರದ ನಾಗೇಂದ್ರ ಬ್ಲಾಕ್ ಗೇರ್ ಹಳ್ಳಿ ಬಡಾವಣೆ, ಮೈಸೂರು ಬ್ಯಾಂಕ್ ಕಾಲೋನಿಗಳಲ್ಲಿ ಬೀದಿ ನಲ್ಲಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದು,

ಶ್ರೀ ಪಿರಿಕಲ್ ಎ. ಮಲ್ಲಪ್ಪ (ಚಿಕ್ಕಪೇಟೆ). — ಮಾನ್ಯ ಉಪಾಧ್ಯಕ್ಷರೇ, ಬಡ ಜನರು ವಾಸ ಮಾಡುತ್ತಿರುವ ಬೆಂಗಳೂರು ನಗರದ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಬಡಾವಣೆ, ಮೈಸೂರು ಬ್ಯಾಂಕ್ ಕಾಲೋನಿಗಳಿಗೆ ಬೆಳಿಗ್ಗೆ ೪ ಗಂಟೆಯಿಂದ ೬ ಗಂಟೆವರೆಗೆ ಮಾತ್ರ ಕುಡಿಯುವ ನೀರನ್ನು ನೀರು ಸರಬರಾಜು ಮಂಡಲಿಯವರು ಸರಬರಾಜು ಮಾಡುತ್ತಿದ್ದಾರೆ. ಇದು ಕಡಿಮೆ ಅವಧಿ. ಆಗಿದೆ. ಇಲ್ಲಿ ರೆವಿನ್ಯೂ ನಿವೇಶನಗಳಿರುವುದರಿಂದ ನಲ್ಲಿ ಸಂಪರ್ಕಗಳೂ ಕಡಿಮೆ ದೂರು ಕೊಟ್ಟರೆ ಮೂರನೇ ದಿವಸ ನೀರನ್ನೇ ಬಿಡುವುದಿಲ್ಲ. ಆದಕಾರಣ ಕನಿಷ್ಠ ಬೆಳಿಗ್ಗೆ ೫ ರಿಂದ ೯ ರವರೆಗೆ ಅಂದರೆ ನಾಲ್ಕು ಗಂಟೆಗಳ ಕಾಲ ನೀರನ್ನು ಸರಬರಾಜು ಮಾಡಲು ಮಂಡಲಿ ಕ್ರಮ ತೆಗೆದುಕೊಳ್ಳುವಂತೆ ಸಂಬಂಧ ಪಟ್ಟವರಿಗೆ ಮಾನ್ಯ ಸಚಿವರು ಆದೇಶ ನೀಡಲು ಕೋರುತ್ತೇನೆ. ಇಲ್ಲಿ ಅನೇಕ ಕಡೆಗಳಲ್ಲಿ ಪೈಪ್‌ಗಳು ಒಡೆದು ನೀರು ಸುರಿಯುತ್ತಿದ್ದರೂ ನೀರು ಸರಬರಾಜು ಮಂಡಲಿ ಅವರು ನಿಧಾನವಾಗಿ ಕ್ರಮ ತೆಗೆದುಕೊಳ್ಳುತ್ತಾರೆ, ಇದರಿಂದ ನೀರಿಗಾಗಿ ಹೊಡೆದಾಟ ಆಗುತ್ತಿದೆ. ಆದಕಾರಣ ಬೀದಿ ನಲ್ಲಿಗಳ ಸಂಖ್ಯೆ ಜಾಸ್ತಿ ಮಾಡಬೇಕು ಹಾಗೂ ಜಿಇಎಸ್ ಕಾಲೇಜ್ ಹಿಂಭಾಗದಲ್ಲಿ ಕಟ್ಟುತ್ತಿರುವ ನೀರಿನ ಟ್ಯಾಂಕ್ ಕಾಮಗಾರಿಯನ್ನು ಜಾಗ್ರತೆ ಪೂರ್ಣಗೊಳಿಸಿ ಅಲ್ಲಿನ ಜನರಿಗೆ ಹೆಚ್ಚಿನ ನೀರನ್ನು ಸರಬರಾಜು ಮಾಡಬೇಕೆಂದು ವಿನಂತಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ(ನಗರಾಭಿವೃದ್ಧಿ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಪೆರಿಕಲ್ ಎಂ. ಮಲ್ಲಪ್ಪನವರು ಬೆಂಗಳೂರು ನಗರದ ಅವರ ಕ್ಷೇತ್ರಕ್ಕೆ ಸಂಬಂಧ ಪಟ್ಟ ಹಾಗೆ ಅದರಲ್ಲೂ ಕೂಡಾ ನಿರ್ದಿಷ್ಟವಾಗಿ ಅವರ ಕ್ಷೇತ್ರದ ಹಲವಾರು ಪ್ರದೇಶಗಳಲ್ಲಿ ನಾಗರೀಕರಿಗೆ ಕುಡಿಯುವ ನೀರಿನ ಬಗ್ಗೆ ಆಗುತ್ತಿರತಕ್ಕಂಥ ಕಳವಳದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಈ ಬೆಂಗಳೂರು ನೀರು ಸರಬರಾಜು ಮತ್ತು ಜಲಮಂಡಲಿಯೊಡನೆ ಸಂಪರ್ಕ ಮಾಡಿ ಅವರ ಒಂದು ಪ್ರಸ್ತಾಪದ ವಿಷಯದ ಬಗ್ಗೆ ಈ ರೀತಿ ಹೇಳಿಕೆಯನ್ನು ಮಾಡಲು ಇಷ್ಟಪಡುತ್ತೇನೆ.

ಪ್ರಸ್ತುತದಲ್ಲಿ ನಾಗೇಂದ್ರ ಬ್ಲಾಕ್ ಗೇರಹಳ್ಳಿ ಪ್ರದೇಶ, ಮೈಸೂರು ಬ್ಯಾಂಕ್ ಕಾಲೋನಿಗಳಿಗೆ ಬೇರೆ ಪ್ರದೇಶಗಳಿಗೆ ನೀಡುವಂತೆ ಪ್ರತಿನಿತ್ಯ ಬೆಳಿಗ್ಗೆ ೪ ಗಂಟೆಯಿಂದ ೬ ಗಂಟೆವರೆಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನೀರಿನ ವಿತರಣಾ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮಹಾನಗರದ ನಾಗರೀಕ ಅಗತ್ಯಗಳನ್ನು ಪೂರೈಸಲು ಜಲಮಂಡಲಿಯು ಹಲವಾರು ಪ್ರಾಮಾಣಿಕ ಕ್ರಮಗಳನ್ನು ಕೈಗೊಂಡಿದೆ.

ರೆವಿನ್ಯೂ ಪ್ರದೇಶಗಳಿಗೆ, ಬೆಂಗಳೂರು ಜಲಮಂಡಲಿಯು ತಾನೇ ಸಾರ್ವಜನಿಕ ಕೊಳಾಯಿಗಳನ್ನು ಹಾಕುವುದಿಲ್ಲ. ರೆವಿನ್ಯೂ ಪ್ರದೇಶದ ಹೆಚ್ಚಿನ ಸಾರ್ವಜನಿಕ ಕೊಳಾಯಿಗಳು ಅಕ್ರಮವಾಗಿದ್ದು, ಅವುಗಳನ್ನು ಕಿತ್ತುಹಾಕಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಸಾಮಾನ್ಯವಾಗಿ ಸಾರ್ವಜನಿಕ ಕೊಳಾಯಿಗಳನ್ನು ಬೆಂ. ಆ. ಪ್ರ : ಬೆಂ. ನ. ಸ.: ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಲ ಅಥವಾ ಬೆಂಗಳೂರು ಜಿಲ್ಲಾಧಿಕಾರಿಗಳಿಂದ ಬೇಡಿಕೆಗಳನ್ನು ಸ್ವೀಕರಿಸಿದ ನಂತರ ಹಾಕಲಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ನೀರಿನ ಬೇಡಿಕೆಯು ನಗರಕ್ಕೆ ಬರುತ್ತಿರುವ ಪ್ರಮಾಣಕ್ಕಿಂತ ಹೆಚ್ಚಿರುವುದರಿಂದ ನೀರಿನ ವಿತರಣಾ ವೇಳೆಯನ್ನು ೨ ಗಂಟೆಗಳ ಅವಧಿಗಿಂತ ಹೆಚ್ಚಿಸಲು ಸಾಧ್ಯವಾಗಿದೆ.

ಕೊಳವೆಗಳ ಸೋರುವಿಕೆಯ ಬಗ್ಗೆ ಬೆಂಗಳೂರು ಜಲ ಮಂಡಳಿಯು ಹೇಳುವುದೇನೆಂದರೆ, ಇವುಗಳನ್ನು ನಿಲ್ಲಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಸೋರುವಿಕೆಗಳು ಕಂಡ ತಕ್ಷಣ ದುರಸ್ತಿಕಾರ್ಯ ಕೈಗೊಳ್ಳಲಾಗುತ್ತಿದೆ. ಸಂಬಂಧಿಸಿದ ಸಂಸ್ಥೆಗಳಿಂದ ಕಛೇರಿಗಳಿಂದ ಸೂಕ್ತ ಬೇಡಿಕೆಗಳು ಬಂದಲ್ಲಿ, ಸಾರ್ವಜನಿಕ ಕೊಳಾಯಿಗಳ ಸಂಖ್ಯೆಯನ್ನು ಹೆಚ್ಚಿಸಬಹುದಾಗಿದೆ. ಆದಾಗ್ಯೂ ಈ ರೆವಿನ್ಯೂ ಪ್ರದೇಶದಲ್ಲಿನ ನಿವೇಶನಗಳನ್ನು ಕ್ರಮ ಬದ್ಧಗೊಳಿಸದವರೆಗೂ, ಈ ಪ್ರದೇಶಕ್ಕೆ ಹೆಚ್ಚು ಕೊಳಾಯಿಗಳನ್ನು ಹಾಕಲು ಸಾಧ್ಯವಿಲ್ಲ.